ಫಾರೆಸ್ಟ್ ಇಲಾಖಾ.

ತಾರೀಖು 18ನೇ ಫಿಬ್ರವರೀ 1876.

ಕೊಡಗು ಫಾರೆಸ್ಟ್ ಇಲಾಖಾ ಸ್ವತ್ತಾದ 6½ ಅಡಿ ಎತ್ತರ ವುಳ್ಳ ಪುಮೂರು 14 ವರುಷ ಪ್ರಾಯದ ವೊಂದು ಗಂಡಾನೆಯು ಕೊಡಗು ಅಸಿಸ್ಟೆಂಟ್ ಕಂಸರ್ವೇಟರ್‌ರಯವರಿಂದ ಹುಣಸೂರಿನಲ್ಲಿ ಈ ಕೆಳಗೆ ಕಂಡ ತಾರೀಖಿನಲ್ಲಿಯೂ ಪರತ್ತುಗಳ ಮೇಲೂ ವಿಕ್ರಯಿಸಲ್ಪಡುವದು.

ಪರತ್ತುಗಳು—ನಗದು ವೊಬಲಗು, ಮತ್ತು ಕೂಡ್ಲೇ ಸಾಗಿಸತಕ್ಕದ್ದು.

ರಿಜಿಸ್ಟರ್ಡ್ ಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಟಪ್ಪಾಲ್ ದ್ವಾರಾ ಕಳುಹಿಸಲ್ಪಟ್ಟ ದರಖಾಸ್ತುಗಳು ಅಸಿಸ್ಟೆಂಟ್ ಕಂಸರ್ವೇಟರ್‌ರಯವರಿಂದ ಅಂಗೀಕರಿಸಲ್ಪಡುವದು. ಸದರೀಯವರು 1876ನೇ ಇಸವಿ ಮಾರ್ಚೀ 20ನೇ ತಾರೀಖಿನಲ್ಲಿ ಹರಾಜ್ ನಡಿಸುವರು. ಈ ಲಕ್ಕೋಟೆಗಳು ಅಸಿಸ್ಟೆಂಟ್ ಕಂಸರ್ವೇಟರ್‌ರಯವರಿಂದಲೇ ಹರಾಜು ಸ್ಥಳದಲ್ಲಿ ರೂಬರೂ ಖುಲ್ಲಾ ಮಾಡಲ್ಪಡುತ್ತೆ, ಆನೇ ಬಗ್ಗೆ ಲೆಟ್ಟರ್ ಮೂಲಕ ದರಖಾಸ್ತು ಮಾಡುವ ಜನಗಳಿಂದ ದರಖಾಸ್ತು ಮಾಡಲ್ಪಟ್ಟ ಪೂರಾವೊಬಲಗಿಗೆ ಕರೆಸಿ ನೋಟೀಗಳನ್ನು ಅಂತಾ ಲೆಟ್ಟರ್‌ಗಳಲ್ಲಿ ಮಲಪೂಸೆ ಮಾಡಿ ಕಳುಹಿಸತಕ್ಕದ್ದು. ಮತ್ತು ಅಂತಾ ದರೋಬಸ್ತು ಕರೆಸಿ ನೋಟುಗಳು ಮುಂಜೂರಾಗದ ದರಖಾಸ್ತುದಾರುಗಳಿಗೆ ಅಸಿಸ್ಟೆಂಟ್ ಕಂಸರ್ವೇಟರಿಂದ ರಿಜಿಸ್ಟರ್ಡ್ ಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಲೆಟ್ಟರ್ ಮೂಲಕ ಹರಾಜಿನ ಮಾರನೇದಿನ ಟಪ್ಪಾಲ್‌ನಲ್ಲಿ ವಾಪಸ್ ಕಳುಹಿಸಲ್ಪಡುವವು. ದರಖಾಸ್ತುದಾರುಗಳ ಹೆಸರು, ಮೇಲುವಿಳಾಸ, ಸ್ಪಷ್ಟವಾಗಿರುವ ಅಕ್ಷರದಲ್ಲಿ ಪೂರ್ತಿಯಾಗಿ ಬರದು ಇರತಕ್ಕದ್ದು.

ಸದರೀ ಆನೆಯು ವಿಕ್ರಯಿಸಲ್ಪಟ್ಟ ದಿನ ಸಾಯಂಕಾಲದ ತರುವಾಯ ಆದರನ್ನು ಇಟ್ಟುಕೊಳ್ಳುವದಕ್ಕಾಗಲಿ, ಮೇವು ಹಾಕುವದಕ್ಕಾಗಲಿ, ಫಾರೆಸ್ಟ್ ಇಲಾಖೆಯವರು ಯಿಪ್ಪು ಮಾತ್ರವೂ ಜವಾಬ್‌ದಾರರಾಗಿರುವದಿಲ್ಲವು.

ತಾರೀಖು 22ನೇ ಫಿಬ್ರವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗಾ ಸ್ಥಳದ ನಂಜಣ್ಣನೆಂಬಾತನ ಮಾಲಾದ 50 ಕಾಡು ಮರದ ದಿಮ್ಮೀಗಳು, 9 ಕೂಜಗಳು ಸಹಾ, ಸದರೀ ಮರಗಳ ಬಾಬತು ಸರ್ಕಾರಕ್ಕೆ ಸಲ್ಲತಕ್ಕ ಕೋರೀ ಬಾಡಿಗೆಯನ್ನು ಭರ್ತೀ ಮಾಡಿಕೊಳ್ಳತಕ್ಕ ಬಗ್ಗೆ ಆಯನೂರು ಕೋರೀಯಲ್ಲಿ 1876ನೇ ಏಪ್ರಿಲ್ 15ನೇ ಮುಕ್ತಂ ಮಿನೊಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜು ನಿಬಂಧನೆ—1873ನೇ ಇಸವಿ ಜೂನ್ 12ನೇ ಮುಕ್ತಂ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ನಾಮೆ ಪ್ರಕಾರ ಯಿರತಕ್ಕದ್ದು.

G. J. VAN SOMEREN, *Captain,*
Conservator of Forests, Mysore & Coorg.

NUNDYDROOG DIVISION.

ತಾರೀಖು 10ನೇ ಮಾರ್ಚೀ 1876.

ಇದರಿಂದ ಸರ್ವರಿಗೂ ತಿಳಿಯುವಬಗ್ಗೆ ಪ್ರಕಟಿಸುವ ದೇನಂದರೆ, ಈಕೆಳಗೆ ವಿವರಿಸುವ ಜಮ್ಮಿ ಸರ್ಕಾರ್ ಹುಕುಂ ಮೂಲಕ ಮಾಪೇ ಮಜಕೂರು 20ನೇ ತಾರೀಖು ಬೆಳಿಗ್ಯೆ 7 ಘಂಟೆಯ ನೊದಲು 10 ಘಂಟೆಯ ವರಿಗೆ ಮೂರು ತುಂಡುಗಳಾಗಿ ವಿಕ್ರಯಿಸಲ್ಪಡುತ್ತೆ.

2. ಸದರೀ ತುಂಡುಗಳು ಸದರೀ ಸ್ಥಳದಲ್ಲಿಯೇ ಪ್ರತ್ಯೇಕ ಪ್ರತ್ಯೇಕವಾಗಿ, ಬೆಂಗಳೂರು ತಾಲ್ಲೂಕು ಅವುಲ್‌ದಾರ್‌ರಿಂದ ಹರಾಜ್ ಹಾಕಲ್ಪಡುತ್ತೆ. ಯಾರ ದರಖಾಸ್ತು ಮುಂಜೂರಾಗುತ್ತೋ ಆ ಮನುಷ್ಯನು ಆಯಾ ತುಂಡು ಹರಾಜ್ ಆದಕೂಡ್ಲೇ ದರಖಾಸ್ತು ವೊಬಲಗು ಪೈಕೀ ನೇಕಡಾ 25 ರೂಪಾಯಿ ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ವೊಬಲಗಿಗೆ ಮಾತಬರ್ ಜಾಮ್ಮಿ ಕೊಟ್ಟು, ಅದನ್ನು ಮಾಹೇ ಮಜಕೂರು 24ನೇ ಮುಕ್ತಂ ಬೆಳಿಗ್ಯೆ 11 ಘಂಟೆಗೆ ಮುಂದಾಗಿಯೇ ಪೂರಾ ನಂದಾಯ ಮಾಡಬೇಕು. ಹಾಗೆಮಾಡದೆ ಹೋದರೆ ಸದರೀ ಜಮ್ಮಿ ಪುನಶ್ಚ ವಿಕ್ರಯಿಸಲ್ಪಟ್ಟು ಆದರಿಂದ ಬರುವ ನಷ್ಟಕ್ಕೆ ಆವ್ವಲ್ ದರಖಾಸ್ತುದಾರನೂ ಅವನ ಜಾಮ್ಮೀದಾರನೂ ಗುರಿ ಮಾಡಲ್ಪಟ್ಟ್ಯಾರು. ಹಾಗೆ ಪುನಶ್ಚ ಹರಾಜ್ ಹಾಕುವದರಿಂದ ಬರುವ ಯಾವ ನುಕ್ಸಾನಾಗಲಿ ಅವರು ಕೊಡಬೇಕಾಗುವದು.

ಜಮ್ಮಾ ಚಕ್ಕುಬಂದಿ.

ಪೂರ್ವಕ್ಕೆ —ಲಾಲ್‌ಬಾಗಿಗೆ ಹೋಗುವ ರಸ್ತೆ.

ಪಶ್ಚಿಮಕ್ಕೆ —ಶಿವರಾಮು ನಾಯಕ ನೆಂಬುವಗೆ ಸಂಬಂಧ್ಪಪಟ್ಟ 57ನೇ ನಂಬರ್ ಜಮ್ಮಾ.

ಉತ್ತರಕ್ಕೆ —ಹೂತೋಟವಾಗಿ ಉಪಯೋಗಿಸಲ್ಪಡುವ, ಬಿ. ನಾಗಪ್ಪ ನೆಂಬುವಗೆ ಸೇರಿದ 63—64 ಮತ್ತು 65ನೇ ಸರ್ವೇ ನಂಬರ್‌ಗಳುಳ್ಳ ಜಮ್ಮಾ.

ದಕ್ಷಿಣಕ್ಕೆ —ಚಿನ್ನಿಗ ನೆಂಬವಗೆ ಸೇರಿದ 136ನೇ ಮತ್ತು 104ನೇ ನಂಬರ್‌ಗಳುಳ್ಳ ಇನಾಮಿನ ಜಮ್ಮಾ.

ಪ್ರತಿ ತುಂಡು ಜಮ್ಮಾನಿನ ಬೀಜವರೀ.

1.	ಪೂರ್ವ ಪಶ್ಚಿಮ	110	ಗಜಗಳು,	ಉತ್ತರ ದಕ್ಷಿಣ	103	ಗಜಗಳು.
2.	ಡಿಟೋ	119	ಡಿಟೋ	ಡಿಟೋ	103	ಡಿಟೋ.
	(ಯಿದು ಮೊದಲನೇ ತುಂಡು ಜಮ್ಮಾನಿಗೆ ದಕ್ಷಿಣದಲ್ಲಿದೆ).					
3.	ಡಿಟೋ	110	ಡಿಟೋ	ಡಿಟೋ	103	ಗಜಗಳು.
	(ಯಿದು 2ನೇ ತುಂಡು ಜಮ್ಮಾನಿಗೆ ದಕ್ಷಿಣದಲ್ಲಿದೆ).					

J. L. PEARSE,
Commissioner.

BANGALORE DISTRICT.

Notice regarding an application of Mudkrishna Naidu for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆ॥ ಕಮ್ಮಿಷನರ್ ಕೋರ್ಟ್‌ನಿಂದ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಹಾಲೀ ಚಿಕ್ಕಬಳ್ಳಾಪುರದ ಕಸಬೇಲಿ ಯಿರುವ ಮುದ್ದಕೃಷ್ಣಮ್ಮ ನಾಯಿಕರು ತನ್ನ ಅಂಣ ಕೊಮಾರುಸ್ವಾಮಿ ನಾಯಿಕರ ಲೇಣಿ 500 ರೂಪಾಯಿ ಬರಮಾಡಿಕ್ಕೊಳ್ಳತಕ್ಕಬಗ್ಗೆ ಸ್ ೯ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟ್‌ನಲ್ಲಿ ವಿಮರ್ಶೆ ಮಾಡಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 2ನೇ ಮಾಹ ಮಾರ್ಚ್ 1876ನೇ ಇಸವಿ, ಮೊಕ್ಕಾಂ ಜಾಲಾ.

L. RICKETTS,
Offg. Dy. Commr.

KOLAR DISTRICT.

Notice regarding an application of Muneppa for a certificate under Act XXVII of 1860.

ಕೋಲಾರ ಡಿ॥ ಡೆಪ್ಯೂಟಿ ಕಮ್ಮಿಷನರ್ ಕೋರ್ಟ್‌ನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮುಳಬಾಗಲ್ ತಾಲ್ಲೂಕು ನಂಗಲೀ ಹೋಬಳಿ ಹಳೇಕುಪ್ಪದಲ್ಲಿರುವ ರೊಖಂ ಮುನೆಪ್ಪನೆಂಬವನು ಫಾತೀಪಟ್ಟ ತನ್ನ ತಮ್ಮ ಸುಬ್ಬಯ್ಯಗೆ ಬರತಕ್ಕ ಉದ್ರೀ ಬಾಕೀಗಳು 800 ರೂಪಾಯಿಗಳು ವಸೂಲ್ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರ್ಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಏಪ್ರೆಲ್ 15ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾಗಿ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

Notice regarding an application of Papaiya for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗುಡಿಬಂಡೇ ತಾಲ್ಲೂಕು ಮಂಡಿಕಲ್ಲು ಹೋಬಳಿ ವೈಕೀ ವರ್ಲಕೊಂಡೆಯಲ್ಲಿರುವ ಮಠದ ಪಾಪೈಯನೆಂಬನು ಫಾತೀಪಟ್ಟ ತನ್ನ ಮಾವ ಮುದ್ದೀರೈಯನೆಂಬವನಿಗೆ ಬರತಕ್ಕ ಉದ್ರೀ ಬಾಕೀಗಳು 1000 ರೂಪಾಯಿಗಳು ವಸೂಲ್ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ತನ್ನ ಹೆಸರಿಗೆ ವಾರಸ್ ಸರ್ಟ